MVC-774/2022 PW-1

**<u>2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

**<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>**

**ದಿಃ 29.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಆರ್ ಜಿ ಬಿ ವಕೀಲರಿಂದಃ**

ನಾನು ಪರಿಹಾರಕ್ಕೋಸ್ಕರ ಅರ್ಜಿ ಸಲ್ಲಸಿದ್ದು ಅದನ್ನು ತಯಾರಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ಅರ್ಜಿಗೆ ಸಹಿ ಮಾಡುವ ಮೊದಲು ಅದರಲ್ಲಿ ಎನು ಬರೆದಿದೆ ಎಂಬುದನ್ನು ತಿಳಿದುಕೊಂಡು ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ನನ್ನ ಸ್ವಂತ ಊರು ಪರಸಾಪುರ ಗ್ರಾಮ. ಕೆಎ-25/ಇಎಲ್ 1843 ಮೊಟಾರು

ಸೈಕಲ್ ನನ್ನದು ಎಂದರೆ ಸರಿ. ಸದರಿ ವಾಹನ ಚಾಲನೆ ಮಾಡಲು ನನಗೆ ಲೈಸನ್ಸ ಇದೆ. ಸದರಿ ಚಾಲನಾ ಪರವಾನಗಿಯನ್ನು ನಾನು ನ್ಯಾಯಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ಮೊಟಾರು ಸೈಕಲ್ ಗೆ ವಿಮೆ ಮಾಡಿಸಿರುತ್ತೇನೆ. ಅದು ಯಾವ ವಿಮಾ ಕಂಪನಿ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ನನ್ನ ಮೊಟಾರು ಸೈಕಲ್‌ನ ವಿಮಾ ಪಾಲಿಸಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿ.

ನನ್ನ ಅರ್ಜಿಯಲ್ಲಿ ದಿನಾಂಕ 27.11.2022 ರಂದು ನಾನು ನನ್ನ ಮೋಟಾರು ಸೈಕಲ್ ತೆಗೆದುಕೊಂಡು ಹುಬ್ಬಳ್ಳಿಯಿಂದ ಶಿಗ್ಗಾಂವ್ ಗೆ ಹೊರಟಿದ್ದೆ ಎಂದರು ಬರೆದಿದೆ ಎಂದರೆ ಸರಿ. ನನ್ನ ಅರ್ಜಿಯಲ್ಲಿ ಲಾರಿ ಸಂಖ್ಯೆ ಕೆಎ-42/ಡಿ-3452 ನನ್ನ ಎದುರುಗಡೆಯಿಂದ ಬರುತ್ತಿತ್ತೆಂದು ಬರೆದಿದೆ ಎಂದರೆ ಸಾಕ್ಷಿ ಇಲ್ಲ ನನ್ನ ಎಡಭಾಗದಲ್ಲಿ ಬರುತ್ತಿತ್ತು ಎಂದು ನುಡಿಯುತ್ತಾರೆ. ಸಾಕ್ಷಿ ನಾನು ಅದೇ ರೀತಿ ಬರೆಸಿರುವುದಿಲ್ಲ ಎನ್ನುತ್ತಾರೆ. ನಾನು ನನ್ನ ಅರ್ಜಿಯಲ್ಲಿ ಲಾರಿ ಸಂಖ್ಯೆ ಕೆಎ-42/ಡಿ-3452 ಪುನಾ-ಬೆಂಗಳೂರು ರಸ್ತೆಯಲ್ಲಿ ನನ್ನ ವಿರುದ್ದ ದಿಕ್ಕಿನಿಂದ ಬರುತ್ತಿತ್ತೆಂದು ಬರೆಸಿದ್ದರೂ ಕೂಡ ಈಗ ಆ ರೀತಿ ಬರೆಸಿಲ್ಲ ಎಂದು ಸುಳ್ಳು ಹೇಳುತ್ತಿ ದ್ದೇನೆ ಎಂದರೆ ಸರಿಯಲ್ಲ. ಪಿಬಿ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆ ಏಕ ಮುಕವಾಗಿ ಮೂರು ಹಾಗೂ ವಿರುದ್ದ ದಿಕ್ಕಿನಿಂದ ಮೂರು ರಸ್ತೆಗಳಿರುವ ರಸ್ತೆ ಎಂದರೆ ಸರಿ . ಸದರಿ ರಸ್ತೆ ಹುಬ್ಬಳ್ಳಿಯಿಂದ ಬೆಂಗಳೂರಿಗೆ ಹೋಗಬೇಕಾದರೆ ಉತ್ತರದಿಂದ ದಕ್ಷಿಣಕ್ಕೆ ಹೋಗುತ್ತದೆ ಎಂದರೆ ಸರಿ. ಸದರಿ ರಸ್ತೆ ಬೆಂಗಳೂರು ಕಡೆಗೆ ದಕ್ಷಿಣದಿಂದ ಶಿಗ್ಗಾಂವ ಹಾವೇರಿ ಕಡೆಗೆ ಹೋಗುತ್ತದೆ ಎಂದರೆ ಸರಿ. ಬೆಂಗಳೂರಿಂದ ಹುಬ್ಬಳಿಗೆ ಬರಬೇಕಾದರೆ ದಕ್ಷಿಣದಿಂದ ಉತ್ತರಕ್ಕೆ ರಸ್ತೆ ಹೋಗುತ್ತದೆ ಎಂದರೆ ಸರಿ. ಹುಬ್ಬಳ್ಳಿಯಿಂದ ಶಿಗ್ಗಾಂವ ಕಡೆಗೆ ಹೋಗಬೇಕೆಂದರೆ ಉತ್ತರದಿಂದ ದಕ್ಷಿಣಭಾಗದಲ್ಲಿ ಪೂರ್ವಾಭಿಮುಖವಾಗಿ ರಸ್ತೆ ಹೋಗುತ್ತದೆ ಎಂದರೆ ಸರಿ. ಅದೇ ರೀತಿ ಬೆಂಗಳೂರಿನಿಂದ ಹುಬ್ಬಳಿ ರಸ್ತೆಯಲ್ಲಿ ಶಿಗ್ಗಾಂವ ಕಡೆ ಹೋಗಬೇಕೆಂದರೆ ಪಶ್ಚಿಮಾಭಿಮುಖವಾಗಿ ಹೋಗಬೇಕೆಂದರೆ ಸರಿ. ಸದರಿ ಬೆಂಗಳೂರು ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿಯ ನಡುವೆ ರೋಡ್ ಡಿವೈಡರ್ ಇದೆ ಎಂದರೆ ಸರಿ. ಬೆಂಗಳೂರಿಂದ ಶಿಗ್ಗಾಂವ ಗೆ ಹೋಗುವ ದಾರಿಯಲ್ಲಿ ಸಿಗುವ ಅದರಗುಂಚಿ ಕ್ರಾಸ್ ಸೂರ್ಯ ಹುಟ್ಟುವ ಕಡೆ ಬರುತ್ತದೆ ಎಂದರೆ ಸರಿ.

ಅದರಗುಂಚಿಗೆ ಹೋಗಬೇಕೆಂದರೆ ಸರ್ವಿಸ್ ರಸ್ತೆ ಯಲ್ಲಿ ಹೋಗಬೇಕೆಂದರೆ ಸರಿ. ಇಂಡಿಯನ್ ಪೆಟ್ರೋಲ್ ಬಂಕ್ ಹಾಗೂ ರಾಜಸ್ಥಾನ ಡಾಬಾ ಬೆಂಗಳೂರಿನಿಂದ ಹುಬ್ಬಳಿಗೆ ಬರುವಾಗ ರಸ್ತೆಯ ಪಶ್ಚಿಮಭಾಗದಲ್ಲಿದೆ ಎಂದರೆ ಸಾಕ್ಷಿ ಹುಬ್ಬಳಿಯಿಂದ ಬೆಂಗಳೂರಿಗೆ ಹೋಗಬೇಕಾದರೆ ರಸ್ತೆಯ ಎಡಭಾಗಕ್ಕೆ ಬರುತ್ತದೆ ಎನ್ನುತ್ತಾರೆ. ನಿಪಿ-3 ಅನ್ನು ಸಾಕ್ಷಿಗೆ ತೋರಿಸಿ ಬೆಂಗಳೂರಿನಿಂದ ಹುಬ್ಬಳ್ಳಿಗೆ ಹೋಗುವ ರಸ್ತೆಯಲ್ಲಿ ಎಡಭಾಗದಲ್ಲಿ ಸದರಿ ಪೆಟ್ರೋಲ್ ಬಂಕ್ ಹಾಗೂ ರಾಜಸ್ಥಾನ ಡಾಬಾ ಬರುತ್ತವೆ ಎಂದರೆ ಸಾಕ್ಷಿ ನನಗೆ ಪೆಟ್ರೋಲ್ ಬಂಕ್ ಹಾಗೂ ರಾಜಸ್ಥಾನ ಡಾಬಾ ಬಗ್ಗೆ ಅಷ್ಟು ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನಮ್ಮ ವಕೀಲರನ್ನು ಕೇಳಿ ತಿಳಿದುಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಾನು ಹುಬ್ಬಳ್ಳಿ ತಾಲ್ಲೂಕು ಪರಸಾಪೂರ ಗ್ರಾಮದಿಂದ ಶಿಗ್ಗಾಂವಿಗೆ ಸಾಕಷಟು ಬಾರಿ ಅಡ್ಡಾಡಿರುತ್ತೇನೆ ಎಂದರೆ ಸರಿ. ಸದರಿ ಪೆಟ್ರೋಲ್ ಬಂಕ್ ಹಾಗೂ ರಾಜಸ್ಥಾನ ಡಾಬಾ ಇವುಗಳು ಬೆಂಗೂರಿನಿಂದ ಹುಬ್ಬಳಿಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಬರುತ್ತದೆ ಎಂದು ಗೊತ್ತಿದ್ದರೂ ನಾನು ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಬೆಂಗಳೂರಿನಿಂದ ಅದರಗುಂಚಿಗೆ ಬರಬೇಕೆಂದರೆ ಸರ್ವಿಸ್ ರಸ್ತೆಯಲ್ಲಿ ಬಂದು ಅಂಡರ್ ಪಾಸ ನಲ್ಲಿ ಬರಬೇಕೆಂದರೆ ಸರಿ. ಬೆಂಗಳೂರಿನಿಂದ ಹುಬ್ಬಳಿ ಕಡೆ ಪೂರ್ವಾಭಿಮುಖವಾಗಿ ಬರುವ ರಸ್ತೆಯಲ್ಲಿ ನಾನು ಹೇಳುವ ಪೆಟ್ರೋಲ್ ಬಂಕ್ ಹಾಗೂ ರಾಜಸ್ಥಾನ ಡಾಬಾ ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಅದೇನು ಮಾಹಿತಿ ಇಲ್ಲ ಎನ್ನುತ್ತಾರೆ. ಈ ವಿಷಯ ನನಗೆ ಗೊತ್ತಿದ್ದರೂ ಕೂಡ ಪರಿಹಾರ ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ನನಗೆ ಮಾಹಿತಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಎಲ್ಲಿಯೂ ಕೂಡ ಕೆಎ-42/ಡಿ-3452 ಲಾರಿ ಬೆಂಗಳೂರಿನ ಕಡೆ ಬಂದು ಅದರಗುಂಚಿಗೆ ತಿರಿಗಿಸಿಕೊಂಡು ಹೋಗುವ ಸಮಯದಲ್ಲಿ ಅಪಘಾತ ವಾಗಿದೆ ಎಂದು ಬರೆದಿಲ್ಲ ಎಂದರೆ ಸಾಕ್ಷಿ ಆತ ನನ್ನ ಎಡಭಾಗಕ್ಕೆ ಬಂದು ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಹುಬ್ಬಳಿಯಿಂದ ಪರಸಾಪೂರ ಸೂರ್ಯ ಮುಳುಗುವ ದಿಕ್ಕಿಗೆ ಬರುತ್ತದೆ. ನಾನು ಪರಸಾಪೂರದಿಂದ ಅದರಗುಂಚಿಗೆ ಹೋಗಬೇಕಾದರೆ ಬೆಂಗಳೂರು ಕಡೆಯಿಂದ ನನ್ನ ಊರಿಗೆ ಹೊಂದಿಕೊಂಡು ಬರುವ ರಸ್ತೆಯಲ್ಲಿ ಎಡಭಾಗದಲ್ಲಿ ಹೋಗುತ್ತೇನೆ ಎಂದರೆ ಸಾಕ್ಷಿ ನಾವು

ಕುಂದುಗೋಳ ಕ್ರಾಸಲ್ಲಿ ಬಂದು ಎಡಭಾಗಕ್ಕೆ ಹೋಗುತ್ತೇವೆ ಎನ್ನುತ್ತಾರೆ. ಮಲ್ಲಿಕಾರ್ಜುನ ಕಾಟೆಪ್ಪ ಗದಿಗೆಪ್ಪನವರ ಎಂದರೆ ನನ್ನ ತಮ್ಮ. ಸದರಿಯವರು ನಾನು ಹೇಳಿದಂತೆ ಪಿರ್ಯಾದು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎನ್ನುತ್ತಾರೆ. ಹಾಗಾದರೆ ಸದರಿ ಪಿರ್ಯಾದಿಗೆ ಯಾರು ಮಾಹಿತಿ ಕೊಟ್ಟಿದಾರೆಂದರೆ ಸ್ಥಳದಲ್ಲಿದ್ದವರು ನನ್ನ ತಮ್ಮನನ್ನು ದೂರವಾಣಿ ಕರೆ ಮಾಡಿ ಕರೆಸಿದ್ದು ಅವರೇ ಪಿರ್ಯಾದು ಕೊಟ್ಟಿರುತ್ತಾರೆ ಎನ್ನುತ್ತಾರೆ. ನನ್ನ ತಮ್ಮ ದೂರು ಕೊಟ್ಟಿದ್ದು ಆ ದೂರಿನಲ್ಲಿ ಅಪಘಾತವಾದ ದಿನಾಂಕ 27.11.2022 ಎಂದು ಅದನ್ನು ನನ್ನ ಅಣ್ಣ ಹೇಳಿರುತ್ತಾರೆಂದು ಹೇಳಿದ್ದಾರೆಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಪರಸಾಪೂರ ಗ್ರಾಮದಿಂದ ಅದರಗುಂಚಿಗೆ ಹೋಗಬೇಕಾದರೆ ನಾನು ರಸ್ತೆಯ ಎಡಭಾಗದಲ್ಲೆ ಹೋಗುತ್ತೇನೆ. ರಸ್ತೆಯ ಎಡಭಾಗ ಎಂದರೆ ಸರ್ವಿಸ ರಸ್ತೆ ಎಂದರೆ ಸರಿ. ನಾನು ರಸ್ತೆಯ ಎಡಭಾಗದಲ್ಲಿ ಹೋಗುತ್ತೇನೆ ಎಂದರೆ ಗಬ್ಬೂರು ಸರ್ಕಲ್ ಇಂದ ಕ್ರಾಸ ಮಾಡಿ ಹೋಗಬೇಕೆಂದರೆ ಸರಿ. ಪರಸಾಪೂರದಿಂದ ಗಬ್ಬೂರು ಸರ್ಕಲ್ ಸುಮಾರು 3 ರಿಂದ 4 ಕಿ.ಮೀ. ಅಂತರದಲ್ಲಿದೆ. ಪರಸಾಪೂರದಿಂದ ಅದರಗುಂಚಿ ಕ್ರಾಸ ಸುಮಾರು 1 ಕಿ.ಮೀ. ಅಂತರದಲ್ಲಿದೆ ಎಂದರೆ ಸರಿ. ಹಾಗಾಗಿ ರಸ್ತೆ ಹತ್ತಿರ ಆಗುತ್ತದೆ ಎಂದು ವರೂರು ಕ್ರಾಸ ಕಡೆಯಿಂದ ಹೋಗಿ ಅಂಡರ್ ಪಾಸ್ ನಲ್ಲಿ ಹೋಗುತ್ತಾರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಕೂಡ ರಸ್ತೆ ಹತ್ತಿರ ಆಗುತ್ತದೆ ಎಂಬ ಕಾರಣಕ್ಕೆ ಸದರಿ ವರೂರು ಕ್ರಾಸ ನಲ್ಲಿ ಹೋಗಿ ಬಲಗಡೆ ಕ್ರಾಸ ಮಾಡಿ ನಾನೇ ಅಪಘಾತ ಮಾಡಿಕೊಂಡಿರುತ್ತೇನೆ ಎಂದರೆ ಸಾಕ್ಷಿ ನಾನು ಅಲ್ಲಿ ಹೋಗಿಲ್ಲ ಎನ್ನುತ್ತಾರೆ. ಈ ವಿಷಯ ಗೊತ್ತಿದ್ದರೂ ಕೂಡ ನಾನು ಸುಳ್ಳು ಸಾಕ್ಷಿ ನುಡಿಯುತ್ತಿ ದ್ದೇನೆ ಎಂದರೆ ಸರಿಯಲ್ಲ. ಲಾರಿ ಸಂಖ್ಯೆ ಕೆಎ-42/ಡಿ-3452 ನಾನು ಹೇಳುವ ದಿವಸ ರಸ್ತೆಯ ಮೇಲೆ ಇರಲಿಲ್ಲ ಎಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ನನ್ನ ತಮ್ಮ ಪಿರ್ಯಾದು ಕೊಡುವ ಸಮಯದಲ್ಲಿ ನೀವೇನಾದರೂ ಲಾರಿ ಸಂಖ್ಯೆ ಹೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನಗೆ ಅಪಘಾತ ವಾದ ಸಮಯದಲ್ಲಿ ಸದರಿ ಲಾರಿಯ ಸಂಖ್ಯೆ ಗೊತ್ತಿರಲಿಲ್ಲ ಹಾಗಾಗಿ ನಾನು ಹೇಳಿಲ್ಲ ಎಂದರೆ ಸರಿ.

ನಮ್ಮದು ಬಿಪಿಎಲ್ ರೇಷನ್ ಕಾರ್ಡ್ ಇದೆ. ಅಪಘಾತವಾದ ನಂತರ ನನ್ನನ್ನು ಕೆಎಂ ಸಿಗೆ ತೆಗೆದುಕೊಂಡು ಹೋದಾಗ ನನ್ನ ತಮ್ಮ, ಅಮ್ಮ ಹಾಗೂ ಮನೆಯವರು ಎಲ್ಲರು ಬಂದಿದ್ದರು ಎಂದರೆ ಸರಿ. ನನಗೆ ಬಿಪಿಎಲ್ ಕಾರ್ಡ ಇದ್ದಿದ್ದರಿಂದ ಕೆ ಎಂ ಸಿ ಇಂದ ಚಿಕಿತ್ಸಾ ವೆಚ್ಚ ಎಲ್ಲವನ್ನು ಸರ್ಕಾರದವೇ ಭರಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಉಚಿತವಾಗಿ ಚಿಕಿತ್ಸೆ ಪಡೆದುಕೊಂಡಿದ್ದರೂ ಕೂಡ ಔಷಧಿ ಹಾಗೂ ಗುಳಿಗೆಗಳನ್ನು ಹೊರಗಡೆ ಬರೆದುಕೊಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಮ್ಮ ನನ್ನನ್ನು ನೋಡಿಕೊಳ್ಳಲು ಅಮ್ಮ ಹಾಗೂ ಮನೆಯವರನ್ನು ಬಿಟ್ಟು ಕೆಲಸಕ್ಕೆ ಹೋಗುತ್ತಿದ್ದ ಎಂದರೆ ಸಾಕ್ಷಿ ಹೋಗಿ ಬಂದು ಮಾಡುತ್ತಿದ್ದ ಎಂದು ನುಡಿಯುತ್ತಾರೆ. ಕೆಎಂಸಿ ಯಲ್ಲಿ ನಾನು ದಾಖಲಾದ ನಂತರ ಪೊಲೀಸರೇನಾದರೂ ಬಂದಿದ್ದರ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ದಿನಾಂಕ 04.11.2022 ರಂದು ಮಧ್ಯಾಹ್ನ 2-59 ಗಂಟೆಗೆ ಕೆಎಂಸಿಯಿಂದ ಡಿಸ್ಚಾರ್ಜ ಆದ ನಂತರ ನನ್ನ ತಮ್ಮ ದಿನಾಂಕ 05.11.2022 ರಂದು ದೂರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ದಿನಾಂಕ 27.10.2022 ರಂದು ಸಾಯಂಕಾಲ 5-40 ಕ್ಕೆ ಚಿಕಿತ್ಸೆಗೆ ಹೋಗಿರುತ್ತೇನೆಂದರೆ ಸಾಕ್ಷಿ ಅಪಘಾತವಾಗಿದ್ದು ಮ. 11 ಗಂಟೆಗೆ ಅದಾದ ನಂತರ ನನಗೆ ಎಚ್ಚರ ಇರಲಿಲ್ಲ ಎನ್ನುತ್ತಾರೆ. ನನ್ನ ಅರ್ಜಿಯಲ್ಲಾಯಿತು ಪಿರ್ಯಾದಿಯಲ್ಲಾಯಿತು ನನಗೆ ಎಚ್ಚರ ಇರಲಿಲ್ಲ ಎಂಬ ವಿಚಾರವನ್ನು ಬರೆಸಿಲ್ಲ ಎಂದರೆ ಸರಿಯಲ್ಲ. ಡಿಸ್ಚಾರ್ಜ ಸಮ್ಮರಿಯ ಮೂಲ ಪ್ರತಿ ನನ್ನ ಕಡೆ ಇದೆ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ನನಗೆ ಕೊಟ್ಟಿರುವ ಡಿಸ್ಚಾರ್ಜ ಸಮ್ಮರಿಯ ಜೆರಾಕ್ಸ ಪ್ರತಿ ಇದು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ದಾಲೆಯಲ್ಲಿ ನಾನು ಕೆಎಂಸಿಗೆ ದಿನಾಂಕ 27.10.2022 ರಂದು ಸಂಜೆ 5-40 ನಿಮಿಷಕ್ಕೆ ಒಳರೋಗಿಯಾಗಿ ದಾಖಲಾಗಿದ್ದೇನೆಂದು ಬರೆದಿದ್ದಾರೆಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ.

**(ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.